**ದಿನಾಂಕಃ 21.09.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಡಿ ಎನ್ ಪಿ ವಕೀಲರಿಂದಃ-**

ದಾವಾ ಸ್ವತ್ತಿಗೆ ಪ್ರತಿವಾದಿ 1 ರಿಂದ 3 ರವರು ಮಾಲೀಕರಾಗಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ 1 ರಿಂದ 3 ರವರು ದಾವಾ ಸ್ವತ್ತಿನಲ್ಲಿ ಸ್ವಾದೀನತೆ ಹೊಂದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ದಾವಾ ಸ್ವತ್ತು ನನ್ನ ಸ್ವಾದೀನದಲ್ಲಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ 1 ರಿಂದ 3 ರವರು ನನಗೆ ಮತ್ತು 1 ನೇ ವಾದಿಯವರಿಗೆ ನಿಪಿ-1 ರಲ್ಲಿರುವಂತೆ ಯಾವುದೇ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ದಿಃ 08.05.2020 ರಂದು ದಾವಾ ಸ್ವತ್ತಿಗೆ ಯಾವುದೇ ಕ್ರಯದ ಮಾತುಕತೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವುದೇ ಕ್ರಯ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವಂತೆ ಪ್ರತಿವಾದಿಗಳು ನನ್ನಿಂದ ರೂ. 25,000-00 ಮುಂಗಡವಗಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಬಾಕಿ ಮೊತ್ತವಾದ ರೂ. 3,75,000-00 ಗಳನ್ನು ಸ್ವೀಕರಿಸಿ ದಾವಾ ಸ್ವತ್ತನ್ನು ವಾದಿಗಳ ಹೆಸರಿಗೆ ನೊಂದಣಿ ಮಾಡಿಸಿಕೊಡುತ್ತೇವೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ದಾವಾ ಆಸ್ತಿಯನ್ನು ಪ್ರತಿವಾದಿಗಳು ವಾದಿಗಳ ಸ್ವಾದೀನಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾದೀನವನ್ನು ನಾನು ಯಾವತ್ತೂ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ರ ನೋಟಿಸನ್ನು ನಾನು ಸುಳ್ಳು ಮಾಹಿತಿಯನ್ನು ನೀಡಿ ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-1 ರ ಕರಾರನ್ನು ಯಾವ ದಿನಾಂಕ, ಸಮಯ, ಎಲ್ಲಿ ಮತ್ತು ಯಾರ ಸಮಕ್ಷಮ ತಯಾರಿಸಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ದಿಃ 08.05.2020 ರಂದು ನಿಪಿ-1 ನ್ನು ವಕೀಲರ ಕಛೇರಿಯಲ್ಲಿ ಸುಮಾರು ಮಧ್ಯಾಹ್ನ 1.30 ಗಂಟೆಗೆ ಪ್ರತಿವಾದಿಗಳು, ಸಾಕ್ಷಿಗಳಾದ ಮಧು ಮತ್ತು ದಯಾನಂದ ರವರ ಸಮಕ್ಷಮದಲ್ಲಿ ತಯಾರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಮುಂಗಡ ಹಣವನ್ನು ರೂ. 500 ಮುಖ ಬೆಲೆಯ 50 ನೋಟಿನಂತೆ ನಾನು ಕೊಟ್ಟಿರುತ್ತೇನೆ. ಸದರಿ ಮುಂಗಡ ಹಣವನ್ನು ನಾನು ಪ್ರತಿವಾದಿಗಳಿಗೆ ಕೊಟ್ಟಿರುತ್ತೇನೆ. ನಾನು ಯಾವುದೇ ಮುಂಗಡ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಸಾಕ್ಷಿಗಳು ನನ್ನ

ಸಂಬಂಧಿಗಳು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅವರು ನನಗೆ ಪರಿಚಯಸ್ಥರು ಎಂದು ನುಡಿಯುತ್ತಾರೆ. ಸದರಿ ಸಾಕ್ಷಿಗಳು ನನಗೆ ಸುಮಾರು 30 ವರ್ಷಗಳಿಂದ ಪರಿಚಯ ಇರುತ್ತಾರೆ ಮತ್ತು ಅವರು ಮತ್ತು ನಾನು ಒಂದೇ ಊರಿನವರಾಗಿರುತ್ತೇವೆ. ನಿಪಿ-1 ರಲ್ಲಿರುವ ಸಹಿಗಳು ಪ್ರತಿವಾದಿಳದ್ದು ಅಲ್ಲ ಎಂದರೆ ಸರಿಯಲ್ಲ ಮತ್ತು ಅದನ್ನು ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರ ಸಾಕ್ಷಿದಾರರು ಕೆ ಎಸ್ ಆರ್ ಟಿ ಸಿ ಬಸ್ಸಿನಲ್ಲಿ ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ನಿಪಿ-1 ನ್ನು ತಯಾರಿಸಿದ ದಿನಾಂಕದಂದು ಸದರಿ ಸಾಕ್ಷಿಗಳು ಕರ್ತವ್ಯದಲ್ಲಿದ್ದರು ಎಂದರೆ ಸಾಕ್ಷಿಯು ಆ ಸಮಯ ಕೋರೋನಾ ಸಮಯವಾಗಿದ್ದರಿಂದ ಸಾಕ್ಷಿಗಳು ಕರ್ತವ್ಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಸಾಕ್ಷಿಗಳಿಗೆ ಸುಳ್ಳು ಮಾಹಿತಿಯನ್ನು ನೀಡಿ ನಿಪಿ-1 ಕ್ಕೆ ಸಹಿ ಹಾಕಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 1 ಮತ್ತು 3 ರವರ ವಯಸ್ಸು ಸುಮಾರು 80 ವರ್ಷ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 3 ರವರಿಗೆ ವಯೋ ಸಹಜ ಖಾಯಿಲೆ ಇದ್ದು ಸೂಕ್ತ ಚಿಕಿತ್ಸೆ ಇಲ್ಲದೇ ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದರೆ ಸರಿಯಲ್ಲ. ಅವರಿಗೆ ಮನೆ ಬಿಟ್ಟು ಓಡಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಅವರಿಗೆ ಮೊಣಕಾಲು ಚಿಪ್ಪು ಸವೆದು ಓಡಾಲು ಸಾಧ್ಯವಾಗದೇ ಮನೆಯಲ್ಲೇ ಮಲಗಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯವರಿಗೆ ಸಹಿ ಮಾಡಲು ಬರುವುದಿಲ್ಲ ಮತ್ತು ಅವರು ಹೆಬ್ಬೆಟ್ಟನ್ನು ಹಾಕುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ಹೆಬ್ಬೆಟ್ಟನ್ನು ಹಾಕುವ ವಿಷಯ ನನಗೆ ಗೊತ್ತಿರದೇ ನಾನೇ ಅವರ ಸಹಿಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಹುಚ್ಚಲಕ್ಕಯ್ಯ ನವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಹುಚ್ಚಲಕ್ಕಯ್ಯ ನವರಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದರೆ ಮೂರು ಜನ ಇರಬಹುದು ಅವರುಗಳೆಂದರೆ ವೆಂಕಟೇಶ, ಶ್ರೀನಿವಾಸ, ಕೃಷ್ಣಮೂರ್ತಿ ಅಲಿಯಾಸ್ ಕಿಟ್ಟ. ಇವರಲ್ಲಿ ಕೃಷ್ಣಮೂರ್ತಿ ಅವರು ಮರಣಹೊಂದಿರುತ್ತಾರೆ. ಹುಚ್ಚಲಕ್ಕಯ್ಯ ನವರಿಗೆ ಹನುಮಂತಪ್ಪ, ತಿಮ್ಮಯ್ಯ, ಪುಟ್ಟಪ್ಪ ಮತ್ತು ಗೋವಿಂದಪ್ಪ ಎಂಬ ನಾಲ್ಕು ಮಕ್ಕಳು ಇರುತ್ತಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನಾನು ಮೇಲೆ ಹೇಳಿರುವ ಹೆಸರುಗಳು ಅವರ ಮೊಮ್ಮಕಳದ್ದಾಗಿರುತ್ತದೆ ಎಂದು ನುಡಿಯುತ್ತಾರೆ.

ಪ್ರತಿವಾದಿಗಳಿಗೂ ಮತ್ತು ಹುಚ್ಚಲಕ್ಕಯ್ಯ ನವರಿಗೆ ಯಾವುದೇ ಸಂಬಂಧ ಇಲ್ಲಾ ಎಂದರೆ ಸಾಕ್ಷಿಯು ಪ್ರತಿವಾದಿಗಳು ಹುಚ್ಚಲಕ್ಕಯ್ಯ ರವರಿಗೆ ಸೊಸೆಯಂದಿರು, ಹನುಮಂತಪ್ಪ ಮೊಮ್ಮಗ ಎಂದು ನುಡಿಯುತ್ತಾರೆ. ಹುಚ್ಚಲಕ್ಕಯ್ಯನವರ ನಾಲ್ಕು ಮಕ್ಕಳೂ ಮರಣಹೊಂದಿರುತ್ತಾರೆ ಎಂದರೆ ಸರಿ. ಹುಚ್ಚಲಕ್ಕಯ್ಯ ನವರ ಮಗನಾದ ಹನುಮಂತಪ್ಪ ಮರಣಹೊಂದಿದ್ದು ಇವರ ವಾರಸುದಾರರಾಗಿ ಭಾಗ್ಯಮ್ಮ ಕೋಂ ಬಸವರಾಜು, ಇಂದ್ರಮ್ಮ ಕೋಂ ತಿಮ್ಮಪ್ಪ, ಮಂಜುಳ ಕೋಂ ರಾಜಣ್ಣ, ರಾಧಮ್ಮ ಕೋಂ ಪುಟ್ಟಣ್ಣ, ವೆಂಕಟೇಶ ಬಿನ್ ತಿಮ್ಮಣ್ಣ, ರಾಮಪ್ಪ ಬಿನ್ ಲೇಟ್ ಸಿದ್ದಪ್ಪ, ರಘು ಬಿನ್ ಲೇಟ್ ಸಿದ್ದಪ್ಪ, ಲತಾ ಕೋಂ ಪಾರಣ್ಣ ಇವರು ದಾವಾ ಆಸ್ತಿಯ ಮಾಲೀಕರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ದಾವಾ ಆಸ್ತಿಯ ಸ್ವಾದೀನತೆಯನ್ನು ಹೊಂದಿ ಸಾಗುವಳಿ ಮಾಡಿಕೊಂಡು ಸರ್ಕಾರಕ್ಕೆ ಕಂದಾಯವನ್ನು ಪಾವತಿಸುತ್ತಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1ನ್ನು ನೋಟರಿಯವರ ಸಮಕ್ಷಮ ತಯಾರಿಸಿರುವುದಿಲ್ಲ ಮತ್ತು ಆ ಸಮಯದಲ್ಲಿ ಯಾರೂ ಹಾಜರು ಇರುವುದಿಲ್ಲ ಎಂದರೆ ಸರಿಯಲ್ಲ.

**( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.